**3 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ. 4111/2023**

**ದಿನಾಂಕಃ 04-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ಮಾರುತಿ ಹೆಚ್ ಸಿ | ಚಾಸಾ-4, ಪ್ರಾಸ-1 |
| ತಂದೆಯ ಹೆಸರು ಃ | ಚಂದ್ರಪ್ಪ ಹೆಚ್ | |
| ವಯಸ್ಸು ಃ | 28 ವರ್ಷ | |
| ಉದ್ಯೋಗ ಃ | ಪೋಲಿಸ್ ಪೇದೆ | |
| ವಾಸ ಃ | ಕಡೂರು | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಮಾರ್ಚ 2023 ರಿಂದ ಇಲ್ಲಿಯವರೆಗೆ ನಾನು ಬೀರೂರು ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 06.08.2023 ರಂದು ರಾತ್ರಿ 7.00 ಗಂಟೆ ಸಮಯದಲ್ಲಿ ನಾನು, ಚಾಸಾ-1 ಮತ್ತು 5 ರವರು ಬೀರೂರು ಪಟ್ಟಣದ ಶಿವಾಜಿ ವೃತ್ತದ ಬಳಿ ಗಸ್ತಿನಲ್ಲಿರುವಾಗ ಬಾತ್ಮಿದಾರರಿಂದ ಬೀರೂರು - ಚಿಕ್ಕಮಗಳೂರು ರಸ್ತೆಯ ಎ 1 ಚಿಕನ್ ಸೆಂಟರ್ ಪಕ್ಕದ ಮಣ್ಣಿನ ರಸ್ತೆಯಲ್ಲಿ ಒಬ್ಬ ಆಸಾಮಿಯು ಒಂದು ಬಿಳಿ ಬಣ್ಣದ ಪ್ಲಾಸಿಕ್ ಚೀಲದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಸದರಿ ವಿಷಯವನ್ನು ಚಾಸಾ-1 ರವರು ನನಗೆ ತಿಳಿಸಿ ಅಲ್ಲೇ ಸ್ಥಳದಲ್ಲಿ ಮಾತನಾಡಿಕೊಂಡು ನಿಂತಿದ್ದ ಚಾಸಾ-2 ಮತ್ತು 3 ರವರನ್ನು ಕರೆಸಿ ಪರಿಚಯ ಮಾಡಿಕೊಂಡು ಚಾಸಾ-1 ರವರು ತಮಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಪಂಚರಾಗಿ ಸಹಕರಿಸುವಂತೆ ಅವರ ಬಳಿ ಕೇಳಿ ಅವರು ಒಪ್ಪಿಕೊಂಡ ಮೇರೆಗೆ ಚಾಸಾ-1 ರವರು ನೋಟಿಸನ್ನು ಜಾರಿ ಮಾಡಿರುತ್ತಾರೆ. ಅವರನ್ನು ನಮ್ಮ ಜೊತೆ ಕರೆದುಕೊಂಡು ರಾತ್ರಿ 7.15 ಗಂಟೆಗೆ ಎ 1 ಚಿಕನ್ ಅಂಗಡಿ ಪಕ್ಕದ ಮಣ್ಣಿನ ರಸ್ತೆಯ ಬಳಿ ಹೋಗಿ ನೋಡಲಾಗಿ ಒಬ್ಬ ವ್ಯಕ್ತಿಯು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡು ನಿಂತಿದ್ದು, ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಪಟ್ಟಿದ್ದು, ನಾನು ಆತನನ್ನು ಹಿಡಿದಿರುತ್ತೇನೆ. ಆತನು ಹಿಡಿದುಕೊಂಡಿದ್ದ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಪರಿಶೀಲಿಸಿ ನೋಡಲಾಗಿ 90 ಎಂಎಲ್ ನ ನಂ1 ಹೈವೈ ಡಿಲಕ್ಸ ಫೈನ್ ವಿಸ್ಕಿ ಎಂದು ಬರೆದಿರುವ 35 ಮದ್ಯದ ಪೌಚುಗಳು ಇದ್ದು, ಅವುಗಳ ಪೈಕಿ 20 ಪೌಚುಗಳ ಮೇಲೆ ಬ್ಯಾಚ್ ನಂ 34 ಎಂದು ಹಾಗೂ 15 ಪೌಚುಗಳ ಮೇಲೆ ಬ್ಯಾಚ್ ನಂ 555 ಎಂದು ಬರೆದಿತ್ತು. ಅವುಗಳ ಒಟ್ಟು ಮೌಲ್ಯ ರೂ. 979-00 ಎಂದು ಪಂಚರು ಅಭಿಪ್ರಾಯ ಪಟ್ಟಿರುತ್ತಾರೆ.

ಆತನ ಬಳಿ ಚಾಸಾ-1 ರವರು ಹೆಸರು ವಿಳಾಸ ಕೇಳಲಾಗಿ ಆತನ ಹೆಸರು ರಾಜಪ್ಪ ಬಿನ್ ಮೈಲಾರಪ್ಪ, ಬೀರೂರು ವಾಸಿ ಎಂದು ತಿಳಿಸಿರುತ್ತಾರೆ. ನಿಮಗೆ ಮದ್ಯ ಮಾರಾಟ ಮಾಡಲು ಪರವಾನಗಿ ಇದೆಯಾ ಎಂದು ಕೇಳಲಾಗಿ ಯಾವುದೇ ಪರವಾನಗಿ ಇಲ್ಲಾ ಎಂದು ತಿಳಿಸಿರುತ್ತಾರೆ. ನಂತರ ಮದ್ಯದ ಪೌಚುಗಳನ್ನು ಅದೇ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಪಿ ಎಂಬ ಅಕ್ಷರದ ಸೀಲು ಮಾಡಿ ಒಂದು ಬಿಳಿ ಬಣ್ಣದ ಚೀಟಿಯಲ್ಲಿ ಕೇಸಿನ ವಿವರ ಬರೆದು ಪಂಚರ ಮತ್ತು ಚಾಸಾ-1 ರವರು ಸಹಿ ಮಾಡಿ ಬಿಳಿ ಚೀಲಕ್ಕೆ ಅಂಟಿಸಿರುತ್ತಾರೆ. ಮಹಜರನ್ನು ರಾತ್ರಿ 7.15 ರಿಂದ 8.15 ರವರೆಗೆ ಬೀದಿ ದೀಪದ ಬೆಳಕಿನ ಸಹಾಯದಿಂದ ಮಾಡಿ ಚಾಸಾ-1 ರವರು ಆರೋಪಿ ಮತ್ತು ಮದ್ಯವನ್ನು ವಶಪಡಿಸಿಕೊಂಡು ಠಾಣೆಗೆ 8.30 ಗಂಟೆಗೆ ಬಂದು ವರದಿಯನ್ನು ತಯಾರಿಸಿ

ಠಾಣಾಧಿಕಾರಿಗೆ ನೀಡಿರುತ್ತಾರೆ. ಸಾಕ್ಷಿಯು ದಿಃ 06.08.2023 ರ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ತೆಗೆದ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಬಿಳಿ ಚೀಲ ಹಾಗೂ ಅದರಲ್ಲಿ ಅಡಕವಾಗಿರುವ ನಂ1 ಹೈವೈ ಡಿಲಕ್ಸ ಫೈನ್ ವಿಸ್ಕಿ ಎಂದು ಬರೆದಿರುವ 35 ಖಾಲಿ ಮದ್ಯದ ಪೌಚುಗಳನ್ನು ನೋಡಿ ಗುರುತಿಸಿದ್ದು ಬಿಳಿ ಬಣ್ಣದ ಚೀಲವನ್ನು ಮುಮಾ-1 ಎಂದು, 35 ಖಾಲಿ ಮದ್ಯದ ಪೌಚುಗಳನ್ನು ಒಟ್ಟಾಗಿ ಮುಮಾ-2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ. ಎಸ್ ಎನ್ ಎ ವಕೀಲರಿಂದಃ</u>**

ಮುಮಾ-1 ಕ್ಕೆ ಚೀಟಿಯನ್ನು ಸ್ಥಳದಲ್ಲೇ ಅಂಟಿಸಿರುತ್ತಾರೆ. ಮುಮಾ-1 ರಲ್ಲಿ ಸಾಕ್ಷಿದಾರರ ಸಹಿಯನ್ನು ಹೊರತುಪಡಿಸಿ ಬೇರೆ ಅವರ ವಿವರ ಬರೆದಿರುವುದಿಲ್ಲ ಎಂದರೆ ಸರಿ. ಚಾಸಾ-1 ರವರಿಗೆ 7.00 ಗಂಟೆಗೆ ಮಾಹಿತಿ ಬಂದಿರುತ್ತದೆ. ನಾವುಗಳು ಆ ದಿನ ಶಿವಾಜಿ ಸರ್ಕಲ್ ನಲ್ಲಿ ಗಸ್ತಿನಲ್ಲಿದ್ದ ಬಗ್ಗೆ ಠಾಣಾ ದಿನಚರಿಯಲ್ಲಿ ಚಾಸಾ-1 ರವರು ನಮೂದು ಮಾಡಿರುತ್ತಾರೆ. ಘಟನಾ ಸ್ಥಳವು ಜನ ನಿಭಿಡ ಪ್ರದೇಶ ಎಂದರೆ ಸರಿಯಲ್ಲ. ಎ 1 ಚಿಕನ್ ಸೆಂಟರ್ ಬಳಿ ಸಾಕಷ್ಟು ಜನ ಸೇರಿರುತ್ತಾರೆ ಎಂದರೆ ಸಾಕ್ಷಿ ನಾವು ಹೋದಾಗ ಮಾಲೀಕರು ಮಾತ್ರ ಇದ್ದರು ಎಂದು ನುಡಿಯುತ್ತಾರೆ. ಎ 1 ಚಿಕನ್ ಸೆಂಟರ್ ನ ಬಾಗಿಲು ಪೂರ್ವಾಭಿಮುಖವಾಗಿರುತ್ತದೆ. ಎ 1 ಚಿಕನ್ ಸೆಂಟರ್ ನ ಮಾಲೀಕರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರಾಗಿ ಸಹಕರಿಸುವಂತೆ ಕೇಳಿರುವುದಿಲ್ಲ. ಚಾಸಾ-2 ಮತ್ತು 3 ರವರು ಘಟನಾ ಸ್ಥಳದ ನಿವಾಸಿಗಳಲ್ಲ ಎಂದರೆ ಸರಿ. ಮುಮಾ ಗಳ ಉತ್ಪಾದನಾ ದಿನಾಂಕ ಮತ್ತು ಕಂಪನಿಯ ವಿವರಗಳು ನನಗೆ ನೆನಪಿಲ್ಲ. ಆದಿನ ನಾವು ಎಷ್ಟು ಕಡೆ ಗಸ್ತು ಮಾಡಿರುತ್ತೇವೆ ಎಂದು ನೆನಪಿಲ್ಲ. ಆರೋಪಿಗೂ ಮುಮಾ ಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಮಹಜರನ್ನು ಠಾಣೆಯಲ್ಲೆ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ಇಲಾಖಾ ವಾಹನವನ್ನು ಶಿವಾಜಿ ಸರ್ಕಲ್ ಬಳಿ ನಿಲ್ಲಿಸಿ ಅಲ್ಲಿಂದ ಘಟನಾ ಸ್ಧಳಕ್ಕೆ ನಡೆದುಕೊಂಡು ಹೋಗಿರುತ್ತೇವೆ. ಘಟನಾ ದಿನ ಆರೋಪಿ ಯಾವ ಬಣ್ಣದ ಬಟ್ಟೆ ಧರಿಸಿದ್ದ ಎಂದು ನೆನಪಿಲ್ಲ. ಮುಮಾ-1 ಮತ್ತು 2 ರ ಮುದ್ದೆ ಮಾಲುಗಳು ಠಾಣೆಯಲ್ಲಿ ಸಾಕಷ್ಟು ಇದೆ ಎಂದರೆ ಸರಿ. ಆರೋಪಿಯ ಮಾಹಿತಿ ನನಗೆ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.